

ಗಿಡಗಳಿದ್ದವು. ಗುಡ್ಡಗಾಡು ಪ್ರದೇಶಗಳಲ್ಲಿ ಎಂಥದ್ದೇ ಹೂವಿನ ಗಿಡ ತಂದು ಬಿಸಾಡಿದರೂ ಸೊಂಪಾಗಿ ಬೆಳೆದು ನಗುತ್ತದೆ. ಇದಕ್ಕೆ ಇಲ್ಲಿನ ಮಂಜಿನ ತಂಪು ಹವಾಗುಣವಲ್ಲದೆ ಮತ್ತೇನೂ ಕಾರಣವಿರಲಾರದು. ದಕ್ಷಿಣ ಭಾರತದ ಊಟಿ, ಮುನಾರ್, ಕೊಡೈಕೆನಾಲ್, ಮತ್ತು ನಮ್ಮೂರಿನ ಕೆಮ್ಮಣ್ಣುಗುಂಡಿಗಳಲ್ಲಿನ ಹೂವಿನ ಗಿಡಗಳು ಕೂಡ ಹೀಗೆ. ಅವುಗಳ ಗಾಢ ಬಣ್ಣ ಕಂಡು ಮರುಳಾಗಿ ಸಸಿ ತಂದು ನಾವಿದ್ದ ಕಡೆ ನೆಟ್ಟರೆ ಹಾಗೆ ಬರುವುದೇ ಇಲ್ಲ. ಮುನಿಸಿಕೊಂಡು ಅತ್ತೂ ಕರೆದು ಸತ್ತೇ ಹೋಗುತ್ತವೆ.

ಇಲ್ಲಿನ ಕೆಲ ಮನೆಗಳ ಮುಂದೆ ನೂರಾರು ಬಿಳಿಯ ಬಾವುಟಗಳನ್ನು ನೆಟ್ಟಿದ್ದರು. ಹಾಗೆಯೇ ಮತ್ತಷ್ಟು ವಸತಿಗಳ ಎದುರು ಕಾವಿ ಬಣ್ಣದ ಧ್ವಜಗಳನ್ನು ಹಾಕಿದ್ದರು. ಅವುಗಳ ಮೇಲೆ ಟಿಬೆಟಿಯನ್ ಭಾಷೆಯಲ್ಲಿ ಮಂತ್ರಗಳನ್ನು ಬರೆಯಲಾಗಿತ್ತು. ನಮ್ಮ ನ್ಯಾಚುರಲಿಸ್ಟಿಗೆ, 'ಏಕೆ ಹೀಗೆ ಎರಡು ಪ್ರತ್ಯೇಕ ಬಣ್ಣದ ಪತಾಕೆಗಳನ್ನು ಹಾರಿಸಿದ್ದಾರೆ' ಎಂದು ಪ್ರಶ್ನಿಸಿದೆ. ಅದಕ್ಕವನು, 'ಕಾವಿ ಬಣ್ಣದ ಬಾವುಟವು ಮನೆಯಲ್ಲಿ ಮಗು ಹುಟ್ಟಿದ ಸಂತೋಷವನ್ನು, ಬಿಳಿ ಬಾವುಟ ಅವರ ಮನೆಯಲ್ಲಿ ಸಾವಾಗಿರುವ ಸೂತಕವನ್ನು ಸೂಚಿಸುತ್ತೆ. ಜನನದ ಮನೆಯ ಬಾವುಟದಲ್ಲಿ ಮಗುವಿನ ಭವಿಷ್ಯ ಉಜ್ವಲವಾಗಲಿ ಎಂಬ ಸಂದೇಶವಿದ್ದರೆ; ತೀರಿಕೊಂಡವರ ಗೃಹದ ಪತಾಕೆಯಲ್ಲಿ ವ್ಯಕ್ತಿಗೆ ಸ್ವರ್ಗ ಸಿಗಲಿ ಎಂದು ಕೋರಲಾಗಿರುತ್ತದೆ ಎಂದು ಹೇಳಿದ. ಬಣ್ಣಗಳು ಒಂದು ಜೀವದ ಆಗಮನದ ಮತ್ತೊಂದು ಪ್ರಾಣದ ನಿರ್ಗಮನದ ಸಂಕೇತಗಳಾಗಿದ್ದವು.

ನಾವು ನೈತಾನ್ ಹಳ್ಳಿ ಮುಟ್ಟಿದಾಗ ಮೂವರು ನಮಗಾಗಿ ಕಾಯುತ್ತಿದ್ದರು. ಒಬ್ಬರು ಅರುಣಿಮಾ ಗಂಡ, ಮತ್ತೊಬ್ಬರು ಅರುಣಿಮಾ ತಂಗಿ ಕೃಷ್ಣಕುಮಾರಿ. ಮತ್ತೊಬ್ಬ ಗಂಡಸು ಲಗೇಜ್ ಹೊರುವ ಕಾಯಕವನ್ನೇ ಮಾಡುವವನು. ನಮ್ಮ ಲಗೇಜ್ ಹೇರಿಕೊಂಡು ಪರ್ವತ ತುದಿಗೆ ಹೋಗಲು ಬೆನ್ನಿನ ಮೇಲೆ ಇಟ್ಟುಕೊಳ್ಳುವ ಪುಟ್ಟಿಗಳನ್ನು ತಂದಿದ್ದರು. ನಮ್ಮ ಮಣಭಾರದ ಕ್ಯಾಮೆರಾ ಬ್ಯಾಗು, ಮತ್ತು ಟ್ರೈ ಪ್ಯಾಡುಗಳನ್ನು ಮಾತ್ರ ಅವರಿಗೆ ಕೊಟ್ಟೆವು. ನಮ್ಮ ನಾಚುರಲಿಸ್ಟ್, 'ನಾವು ಹೆಚ್ಚೆಂದರೆ ಒಂದು ರಾತ್ರಿ ಮಾತ್ರ ಆ ಬೆಟ್ಟದ ತುದಿಯಲ್ಲಿ ಉಳಿಯುವುದು. ಹೀಗಾಗಿ ಕನಿಷ್ಠ ಬಟ್ಟೆ ಹಾಗೂ ಇತರೆ ಅಗತ್ಯ ಸಾಮಾನುಗಳನ್ನು ಮಾತ್ರ